ಕಲ್ಯಾಣ ಮಂಟಪಗಳ ಮೇಲೆ ವೃತ್ತಿ ತೆರಿಗೆ.

320 - ಶ್ರೀ ಬಸವರಾಜ್ (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಲ್ಯಾಣ ಮಂಟಪಗಳ ಮೇಲೆ ವೃತ್ತಿ ತೆರಿಗೆಯನ್ನು ವಿಧಿಸಿರುವುದು ನಿಜವೇ; (ವಿವರ ನೀಡುವುದು.)

ಆ) ಈ ವೃತ್ತಿ ತೆರಿಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ಕಲ್ಯಾಣ ಮಂಟಪಗಳಿಗೆ ವಿಕ ಪ್ರಕಾರವಾಗಿರುವುದು ನಿಜವೇ;

ಇ) ಗ್ರಾಮೀಣ ಪ್ರದೇಶದ ಕಲ್ಯಾಣ ಮಂಟಪಗಳ ಆದಾಯ ಪಟ್ಟಣ ಪ್ರದೇಶದ ಕಲ್ಯಾಣ ಮಂಟಪಗಳ ಆದಾಯಕ್ಕಿಂತ ಕಡಿಮೆ ಇರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ ಗ್ರಾಮಾಂತರ ಪ್ರದೇಶದ ಕಲ್ಯಾಣ ಮಂಟಪಗಳ ಮೇಲೆ ವಿಧಿಸಿದ ವೃತ್ತಿ ತೆರಿಗೆಯ ಪುನರ್ ವಿಮರ್ಶೆ ಮಾಡುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಹೌದು. 1.4.1992 ರಿಂದ

ಆ) ಹೌದು.

ಇ) ಕಲ್ಯಾಣ ಮಂಟಪಗಳನ್ನು ಹೊಂದಿರುವುದು ವೃತ್ತಿ ಎಂದು ಪರಿಗಣಿಸಿ ವೃತ್ತಿ ತೆರಿಗೆಯನ್ನು ವಿಧಿಸಲಾಗಿದೆಯೇ ಹೊರತು ಆದಾಯವನ್ನು ಪರಿಗಣಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಮಾಸಾಶನ.

227 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನ ಕೊಡಿಸುವುದಾಗಿ ಅನೇಕ ವಿಜೆಂಟರು ಮುಗ್ಧ ಜನರಿಂದ ಹಣ ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ವ್ಯಕ್ತಿ ನನ್ನ ಜೊತೆ ಜೈಲಿನಲ್ಲಿದ್ದ ಎಂದು ಕೆಲವು ಸ್ವಾತಂತ್ರ್ಯ ಹೋರಾಟಗಾರರು ಕೊಡುತ್ತಿರುವ ಸುಳ್ಳು ಸರ್ಟಿಫಿಕೇಟ್ ಆಧಾರದ ಮೇಲೆ ಮಾಸಾಶನ ಮಂಜೂರಾತಿ ಮಾಡುವ ನೀತಿಯನ್ನು ಸರ್ಕಾರ ಒಪ್ಪಿದೆಯೇ;

ಇ) ಆ ರೀತಿ ಮಾಸಾಶನವನ್ನು ಕೊಡುವುದನ್ನು ಇನ್ನೂ ಮುಂದುವರೆಸಿದರೆ ಅನರ್ಹ ವ್ಯಕ್ತಿಗಳೆಲ್ಲ ಆ ಸೌಲಭ್ಯವನ್ನು ತೆಗೆದುಕೊಳ್ಳುತ್ತಾರೆಂಬುದನ್ನು ಸರ್ಕಾರ ಯೋಚಿಸಿದೆಯೇ;

ಈ) ಅಂತಹ ಮಾಸಾಶನವನ್ನು ಕೋರಿ ಇದುವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಉ) ಅವರಿಗೆಲ್ಲ ಎಷ್ಟು ದಿನದಲ್ಲಿ ಮಾಸಾಶನ ಮಂಜೂರು ಮಾಡಲಾಗುವುದು;

ಊ) ಅಪ್ರಮಾಣಿಕತನವನ್ನು ತಪ್ಪಿಸಲು ಇನ್ನು ಮುಂದೆ ಈ ಮಾಸಾಶನವನ್ನು ರದ್ದು ಮಾಡಲಾಗುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಇಲ್ಲಿಯ ತನಕ 446 ಹೊಟ್ಟ ಅರ್ಜಿಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಉ) ಸುಳ್ಳು ದಾಖಿಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದರೆ ಮಂಜೂರು ಮಾಡಲಾಗುವುದಿಲ್ಲ.

ಊ) ಅನರ್ಹವೆನಿಸಿದ ಪ್ರಕರಣಗಳಲ್ಲಿ ಈಗಾಗಲೇ ಮಾಸಾಶನವನ್ನು ರದ್ದುಗೊಳಿಸಲಾಗಿದೆ.

ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಹಣದ ಲೂಟಿ.

226 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಮಾಸಾಶನ ಕೊಡಿಸುವುದಾಗಿ ಮುಗ್ಧ ಜನರಿಂದ ದಲ್ಲಾಳಿಗಳು ಹಣ ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ವ್ಯಕ್ತಿ ತನ್ನ ಜೊತೆ ಜೈಲಿನಲ್ಲಿದ್ದ ಎಂದು ಕೆಲವು ಜನರು ಕೊಡುತ್ತಿರುವ ಸುಳ್ಳು ಸರ್ಟಿಫಿಕೇಟನ್ನೇ ಆಧರಿಸಿ ಮಾಸಾಶನ ಮಂಜೂರಾತಿ ಮಾಡುವ ಕ್ರಮ ಸರ್ಕಾರದಲ್ಲಿರುವುದೇ;

ಇ) ಮಾಸಾಶನ ಕೊಡಿಸುವ ಆಸೆ ಹುಟ್ಟಿಸಿ ಅನೇಕ ವಿಜೆಂಟರು ಮುಗ್ಧ ಜನರಿಂದ ಹಣ ಲೂಟಿ ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಯೋಚಿಸಿದೆಯೇ;

ಈ) ಬಂದಿರುವ ಅಂತಹ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಕೇವಲ ಅರ್ಹ ವ್ಯಕ್ತಿಗಳಿಗೆ ಮಾತ್ರ ಮಂಜೂರಾತಿ ನೀಡುವಂತೆ ಸರ್ಕಾರ ಆದೇಶ ನೀಡುತ್ತಿದೆಯೇ ;

ಉ) ಈ ಮಾಸಾಶನವನ್ನು ರದ್ದುಮಾಡುವ ಮೂಲಕ ಹಣದ ಲೂಟಿಯನ್ನು ತಪ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅರ್ಹ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾತ್ರ ಮಾಸಾಶನ ಮಂಜೂರು ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ವಿಧಾನ ಸೌಧ ಒಳ ಆವರಣದಲ್ಲಿ ಲಕ್ಷಾಂತರ ರೂ ಬೆಲೆ ಬಾಳುವ ಪೀಠೋಪಕರಣ ಬಿದ್ದಿರುವುದರ ಬಗ್ಗೆ

228- ಶ್ರೀ ಕೆ.ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದ ಒಳ ಆವರಣದಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ಪೀಠೋಪಕರಣಗಳು ಬಿಸಿಲು ಮಳೆಯಿಂದ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅವುಗಳನ್ನು ಬಿಸಿಲು ಮಳೆಯಿಂದ ರಕ್ಷಿಸುವ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ?

ಇ) ಇನ್ನು ಮುಂದೆ ಹೊಸ ಪೀಠೋಪಕರಣಗಳನ್ನು ಖರೀದಿಸುವ ಬದಲು ಈ ಪೀಠೋಪರಣಗಳನ್ನೇ ದುರಸ್ಥಿಪಡಿಸಿ ಸದುಪಯೋಗಪಡಿಸಿಕೊಳ್ಳುವಂತೆ ಸಂಬಂಧಪಟ್ಟವರಿಗೆ ಸರ್ಕಾರ ಆದೇಶಿಸುವುದೇ?